**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ**

**ಸಿ.ಸಿ. ಸಂಖ್ಯೆ : 815/2017**

ಚಾಸಾ : 30
ಪ್ರಾಸಾ : 19

| | |
|---|---|
| **ಹೆಸರು** | : ಎನ್ ಕುಮಾರ್ ಆರಾಧ್ಯ |
| **ತಂದೆಯ ಹೆಸರು** | : ನೀಲಕಂಠ ಆರಾಧ್ಯ |
| **ವಯಸ್ಸು** | : 63 ವರ್ಷ |
| **ಉದ್ಯೋಗ** | : ನಿವೃತ್ತ ಪೋಲಿಸ್ ವೃತ್ತ ನಿರೀಕ್ಷಕರು |
| **ವಾಸಸ್ಥಳ** | : ಮೈಸೂರು |

**ದಿನಾಂಕ : 04-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮಾನ್ಯ ಸ. ಸ. ಅ. ರವರಿಂದ ಃ -**

ನಾನು ದಿನಾಂಕ 14-10-2016 ರಿಂದ 31-01-2019 ರವರೆಗೆ ವಿರಾಜಪೇಟೆ ವೃತ್ತದ ವಿರಾಜಪೇಟೆ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 19-05-2017 ರಂದು ಈ ಪ್ರಕರಣದ ಕಡತವನ್ನು ಚಾಸಾ25 ರವರಿಂದ ಪಡೆದುಕೊಂಡು ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಿ ತನಿಖೆ ಮುುಂದುವರೆಸಿರುತ್ತೇನೆ. ಅದೇ ದಿನ ಕೃತ್ಯ ಸ್ಥಳಕ್ಕೆ ಭೇಟಿ ನೀಡಿ, ಅಲ್ಲಿಗೆ ಪಂಚರಾದ ಚಾಸಾ9 ಹಾಗೂ 10 ರವರನ್ನು ಬರಮಾಡಿಕೊಂಡು ಅವರಿಗೆ ಪ್ರಕರಣದ ವಿಚಾರವನ್ನು ತಿಳಿಸಿ ಮಹಜರಿನ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡಿದ್ದು, ಅದಕ್ಕೆ ಅವರು ಒಪ್ಪಿಕೊಂಡಿದ್ದು, ನಂತರ ಪಿರ್ಯಾದುದಾರರಾದ ಚಾಸಾ-1 ರವರು ಹಾಜರಿದ್ದು, ಕೃತ್ಯ ಸ್ಥಳವನ್ನು ತೋರಿಸಿ ಕೊಟ್ಟ ಮೇರೆಗೆ, ಚಾಸಾ1, 9 ಹಾಗೂ 10 ರವರ ಸಮಕ್ಷಮ ಕೃತ್ಯ ಸ್ಥಳದ ಮಹಜರ ಕ್ರಮ ಜರುಗಿಸಿರುತ್ತೇನೆ. ಸದರಿ ಮಹಜರಿನ ಸಮಯದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿ ಹಾಗೂ ಫೋಟೋವನ್ನು ಸಹ ತೆಗೆದಿರುತ್ತೇವೆ. ಸಾಕ್ಷಿಗೆ ನಿಪಿ2 ನ್ನು ತೋರಿಸಲಾಗಿ, ಸಾಕ್ಷಿ ಅದು ಮೇಲೆ ಹೇಳಿದಂತೆ ಕೃತ್ಯ ಸ್ಥಳದಲ್ಲಿ ಜರುಗಿಸಿದ ಮಹಜರು ಎಂದು ಗುರುತಿಸಿ, ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ2(ಡಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದು ನಿಪಿ 2 ರಂತೆ ಮಹಜರ ಕ್ರಮ ಜರುಗಿಸುವಾಗ ಕೃತ್ಯ ಸ್ಥಳದಲ್ಲಿ ತಯಾರಿಸಿದ ಕಚ್ಚಾ ನಕಾಶೆ ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಕಚ್ಚಾ ನಕಾಶೆಯನ್ನು ನಿಪಿ23 ಎಂದು, ಸಾಕ್ಷಿಯ ಸಹಿಯನ್ನು ನಿಪಿ23(ಎ) ಎಂದು ಗುರುತಿಸಲಾಯಿತು. ನಂತರ 1 ನೇ ಆರೋಪಿಯ ಮನೆಯ ಬಳಿಗೆ ಹೋಗಿ ಅವರನ್ನು ವಶಕ್ಕೆ ಪಡೆದು ಕಛೇರಿಗೆ ಕರೆ ತಂದು, ಅವರನ್ನು ವಿಚಾರಣೆ ಮಾಡಿ, 1 ನೇ ಆರೋಪಿಯ ಸ್ವಇಚ್ಛ ಹೇಳಿಕೆಯನ್ನು ದಾಖಲಿಸಿಕೊಂಡು ದಸ್ತಗಿರಿ ಕ್ರಮ ಜರುಗಿಸಿರುತ್ತೇನೆ.

1 ನೇ ಆರೋಪಿ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ಚಾಸಾ-1 ರವರಿಗೆ ಸೇರಿದ ಬಟ್ಟೆ ಹಾಗೂ ಇತರ ಸ್ವತ್ತುಗಳು ಗಾಂಧೀನಗರದಲ್ಲಿರುವ ತಮ್ಮ ವಾಸವಿರುವ ಬಾಡಿಗೆ ಮನೆಯಲ್ಲಿರುವುದಾಗಿ ತಿಳಿಸಿದ್ದು, ಅವರ ಸ್ವಇಚ್ಛಾ ಹೇಳಿಕೆ ಮೇರೆಗೆ ಹಿಂದೆ 1 ನೇ ಆರೋಪಿ ಹಾಗೂ ಚಾಸಾ1 ರವರು ವಾಸವಿದ್ದ ಚಾಸಾ15 ರವರಿಗೆ ಸೇರಿದ ಬಾಡಿಗೆ ಮನೆಗೆ ಹೋಗಿದ್ದು, ಅಲ್ಲಿ 1 ನೇ ಆರೋಪಿಯು ಒಂದು ಮಿನಿ ಗ್ಯಾಸ್ ಸ್ಟೌವ್, ನಾಲ್ಕು ಸಿಲ್ವರ್ ಪಾತ್ರೆಗಳು, ಒಂದು ಸ್ಟೀಲ್ ಗುಂಡಿ, ಒಂದು ಸ್ಟೀಲ್ ಚೆಂಬು, ಒಂದು ತವಾ, ಎರಡು ಸ್ಟೀಲ್ ಬಾಂಡ್ಲಿ, ಮೂರು ಸ್ಟೀಲ್ ತಟ್ಟೆಗಳು, ಒಂದು ದೇವರು ಫೋಟೋ, ಮೂರು ಪ್ಲಾಸ್ಟಿಕ್ ಬಕೆಟ್ ಗಳು, ಎರಡು ಚಾಪೆಗಳು, ಒಂದು ಬೆಡ್ ಶೀಟ್, ಒಂದು ಸೂಟ್ ಕೇಸ್, ಒಂದು ರೇಷ್ಮೆ ಸೀರೆ ಹಾಗೂ ಇತರೆ ಆರು ಸೀರೆಗಳು ಹಾಗೂ ಆರು ಬ್ಲೌಸ್ ಗಳು, 10 ಜೊತೆ ಮಗುವಿನ ಬಟ್ಟೆಗಳನ್ನು ತೋರಿಸಿಕೊಟ್ಟಿದ್ದು, ನಂತರ ಪಿರ್ಯಾದುದಾರರಾದ ಚಾಸಾ1, ಪಂಚರಾದ ಚಾಸಾ-9 ಹಾಗೂ 10 ರವರ ಸಮಕ್ಷಮ ಮಹಜರ ಕ್ರಮ ಜರುಗಿಸಿ ಸದರಿ ಸ್ವತ್ತುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಆ ಸಮಯದಲ್ಲಿಯೂ ಸಹ ಫೋಟೋ ತೆಗೆದಿರುತ್ತೇವೆ. ಸಾಕ್ಷಿಗೆ ನಿಪಿ3 ನ್ನು ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ಜರುಗಿಸಿದ ಅಮಾನತ್ತು ಮಹಜರು ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ3 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ3(ಡಿ) ಎಂದು ಗುರುತಿಸಲಾಯಿತು.

ನಂತರ ಕಛೇರಿಗೆ ಹಿಂತಿರುಗಿ ಅಮಾನತ್ತುಪಡಿಸಿಕೊಂಡ ಮೇಲೆ ಹೇಳಿದ ಸ್ವತ್ತುಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 42/2017 ರಂತೆ ದಾಖಲಿಸಿಕೊಂಡು, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಪಿರ್ಯಾದುದಾರರಾದ ಚಾಸಾ1 ರವರ ಮರು ಹೇಳಿಕೆ ಹಾಗೂ ಸಾಕ್ಷಿದಾರರಾದ ಚಾಸಾ7 ಹಾಗೂ 8 ರವರ ಹೇಳಿಕೆಗಳನ್ನು ದಾಖಲಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ದಿನಾಂಕ 20-05-2017 ರಂದು 1 ನೇ ಆರೋಪಿಯ

ಸ್ವಇಚ್ಚ ಹೇಳಿಕೆ ಮೇರೆಗೆ ಅವರ ವಾಸದ ಮನೆಗೆ ತೆರಳಿದ್ದು ಅಲ್ಲಿ ಆರೋಪಿಯು ಕೃತ್ಯಕ್ಕೆ ಬಳಸಿದ ಎಸ್ ಬಿ ಬಿ ಎಲ್ ಬಂದೂಕು ಹಾಗೂ ಅದಕ್ಕೆ ಸಂಬಂಧಿಸಿದ ಪರವಾನಗಿ ಪತ್ರವನ್ನು ಹಾಜರುಪಡಿಸಿದ್ದು ಅಲ್ಲಿ ಪಂಚರಾದ ಚಾಸಾ11 ಹಾಗೂ 12 ರವರ ಸಮಕ್ಷಮ ಮಹಜರ ಕ್ರಮ ಜರುಗಿಸಿ ಸದರಿ ಬಂದೂಕು ಹಾಗೂ ಪರವಾನಗಿ ಪತ್ರವನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಆ ಸಮಯದಲ್ಲಿ ಫೋಟೋ ಸಹ ತೆಗೆದಿರುತ್ತೇವೆ. ಸಾಕ್ಷಿಗೆ ನಿಪಿ17ನ್ನು ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ಜರುಗಿಸಿದ ಅಮಾನತ್ತು ಮಹಜರು ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ17 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ17(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಎರಡು ಫೋಟೋ ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ಮಹಜರು ಜರುಗಿಸುವಾಗ ತೆಗೆದ ಫೋಟೋ ಎಂದು ಗುರುತಿಸುತ್ತಾರೆ. ಈ ಸಂದರ್ಭದಲ್ಲಿ ಆರೋಪಿ ಪರ ವಕೀಲರು ಸದರಿ ಫೋಟೋಗೆ ಸಂಬಂಧಿಸಿದಂತೆ ಸಿಡಿ ಒಡೆದು ಹೋಗಿದ್ದು, ಅದಕ್ಕೆ ಸಂಬಂಧಿಸಿದಂತೆ ನೆಗೆಟಿವ್ ಅಥವಾ ಭಾರತ ಸಾಕ್ಷ್ಯ ಅಧಿ ನಿಯಮ 65(ಬಿ) ರಡಿಯಲ್ಲಿ ಪ್ರಮಾಣ ಪತ್ರ ಹಾಜರುಪಡಿಸದೆ ಇರುವುದರಿಂದ ಗುರುತಿಸಲು ಬರುವುದಿಲ್ಲ ಎಂದು ತಕರಾರು ಮಾಡಿದ್ದು, ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು ಸದರಿ ಫೋಟೋಗಳನ್ನು ಕ್ರಮವಾಗಿ ನಿಪಿ24 ಹಾಗೂ 25 ಎಂದು ಗುರುತಿಸಲಾಯಿತು. ನಂತರ ಕಛೇರಿಗೆ ಹಿಂತಿರುಗಿ ಅಮಾನತ್ತುಪಡಿಸಿಕೊಂಡ ಮೇಲೆ ಹೇಳಿದ ಸ್ವತ್ತುಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 43/2017 ರಂತೆ ದಾಖಲಿಸಿಕೊಂಡು, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಸಾಕ್ಷಿದಾರರಾದ ಚಾಸಾ3 ರಿಂದ 6, 9, 10 ಹಾಗೂ 15 ರವರ ಹೇಳಿಕೆಗಳನ್ನು ದಾಖಲಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ನಂತರ 1ನೇ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಂತರ ಅದೇ ದಿನ ಅಂದರೆ ದಿನಾಂಕ 20-05-2017 ರಂದು ಚಾಸಾ1 ರವರು ಕಛೇರಿಗೆ ಹಾಜರಾಗಿ ತನ್ನ ಹಾಗೂ 1ನೇ ಆರೋಪಿಯ ವಿವಾಹ ನಿಶ್ಚಿತಾರ್ಥ ಮಹೋತ್ಸವದ ಪತ್ರಿಕೆ, ಮದುವೆಯ ಆಮಂತ್ರಣ ಪತ್ರಿಕೆ ಹಾಗೂ ಮದುವೆಯ ಸಮಯದಲ್ಲಿ ತೆಗೆದ ನಾಲ್ಕು ಫೋಟೋಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಚಾಸಾ-1, ಪಂಚರಾದ ಚಾಸಾ9 ಹಾಗೂ 10 ರವರ ಸಮಕ್ಷಮ ಮಹಜರ ಕ್ರಮ ಜರುಗಿಸಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಆ ಸಮಯದಲ್ಲಿ ಫೋಟೋ ಸಹ ತೆಗೆಸಿರುತ್ತೇನೆ. ಸಾಕ್ಷಿಗೆ ನಿಪಿ4ನ್ನು ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ಜರುಗಿಸಿದ ಅಮಾನತ್ತು ಮಹಜರು ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ4

ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ4(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ5 ರಿಂದ 10 ನ್ನು ತೋರಿಸಲಾಗಿ ಸಾಕ್ಷಿಯು ಅದು ಮೇಲೆ ಹೇಳಿದಂತೆ ನಿಪಿ4 ರಂತೆ ಜರುಗಿಸಿ ಅಮಾನತ್ತುಪಡಿಸಿಕೊಂಡ ವಿವಾಹ ನಿಶ್ಚಿತಾರ್ಥ ಮಹೋತ್ಸವದ ಪತ್ರಿಕೆ, ಮದುವೆಯ ಆಮಂತ್ರಣ ಪತ್ರಿಕೆ ಹಾಗೂ ಮದುವೆಯ ಸಮಯದಲ್ಲಿ ತೆಗೆದ ನಾಲ್ಕು ಫೋಟೋಗಳೆಂದು ಗುರುತಿಸುತ್ತಾರೆ.

ನಂತರ ಅದೇ ದಿನ ಅಂದರೆ ದಿನಾಂಕ 20-05-2017 ರಂದು ಚಾಸಾ1 ರವರು ದಿನಾಂಕ 05-09-2015 ರಂದು ಮಾಡಿಕೊಂಡ ಹೇಳಿಕೆ ಒಪ್ಪಂದ ಪತ್ರ, ದಿನಾಂಕ 24-08-2015 ರಂದು ವಿರಾಜಪೇಟೆ ನಗರ ಪೋಲಿಸ್ ಠಾಣೆಗೆ ದೂರನ್ನು ನೀಡಿದ ಬಗ್ಗೆ ಸ್ವೀಕೃತಿ ಹಾಗೂ ಸದರಿ ದೂರಿಗೆ ಸಂಬಂಧಿಸಿದಂತೆ ವಿರಾಜಪೇಟೆ ನಗರ ಪೋಲಿಸ್ ಠಾಣೆಯವರು ನೀಡಿದ ಹಿಂಬರಹವನ್ನು, ದಿನಾಂಕ 26-11-2016 ರಂದು ವಿಚಾರಣೆಗೆ ಹಾಜರಾಗುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪೊನ್ನಂಪೇಟೆಯವರು ನೀಡಿದ ಪತ್ರದ ಮೂಲ ಪ್ರತಿಯನ್ನು, ವಿರಾಜಪೇಟೆ ನಗರ ಪೋಲಿಸ್ ಠಾಣೆಯಲ್ಲಿ ದಾಖಲಾದ ಎನ್ ಸಿ ಆರ್ ನಂ. 141/2016 ಕ್ಕೆ ಸಂಬಂಧಿಸಿದಂತೆ ಮೂಲ ಪ್ರತಿ, ದಿನಾಂಕ 27-02-2017 ರಂದು ಪಿರ್ಯಾದುದಾರರು ಹುಣಸೂರಿನ ಸಿಡಿಪಿಓ ಕಛೇರಿಗೆ ನೀಡಿದ ದೂರಿನ ಜೆರಾಕ್ಸ್ ಪ್ರತಿ ಹಾಗೂ ದಿನಾಂಕ 20-03-2017 ರಂದು ಸದರಿ ಸಿಡಿಪಿಓ ಕಛೇರಿಯಿಂದ ಕಳುಹಿಸಿದ ಎರಡು ನೋಟಿಸ್ ನ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ಸಾಕ್ಷಿಗೆ ನಿಪಿ16 ನ್ನು ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ಪಿರ್ಯಾದಿಯು ದಿನಾಂಕ 05-09-2015 ರಂದು 1 ನೇ ಆರೋಪಿ ಜೊತೆ ಮಾಡಿಕೊಂಡು ಹೇಳಿಕೆ / ಒಪ್ಪಂದ ಪತ್ರ ಎಂದು ಗುರುತಿಸುತ್ತಾರೆ. ನಂತರ ದಿನಾಂಕ 02-06-2017 ರಂದು 1 ನೇ ಆರೋಪಿ ಹಾಗೂ ಪಿರ್ಯಾದಿ ನಡುವೆ ಮದುವೆ ನಡೆದ ಹುಣಸೂರಿನಲ್ಲಿರುವ ಪರಸಯ್ಯನ ಕಲ್ಯಾಣ ಮಂಟಪದಲ್ಲಿ ಮಹಜರ ಕ್ರಮ ಜರುಗಿಸುವಂತೆ ಚಾಸಾ-28 ರವರನ್ನು ಕಳುಹಿಸಿಕೊಟ್ಟಿದ್ದು, ಅವರು ಅಲ್ಲಿಗೆ ತೆರಳಿ ಪಂಚರ ಸಮಕ್ಷಮ ಮಹಜರ ಕ್ರಮ ಜರುಗಿಸಿ, ಸದರಿ ಮಹಜರಿನೊಂದಿಗೆ ಪಂಚರ ಹೇಳಿಕೆ ಹಾಗೂ ಮಹಜರಿಗೆ ಸಂಬಂಧಿಸಿದ ಫೋಟೋವನ್ನು ಹಾಜರುಪಡಿಸಿದ್ದು ಅದನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಗೆ ನಿಪಿ12 ನ್ನು ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ಚಾಸಾ28 ರವರು ಜರುಗಿಸಿದ ಮಹಜರು ಎಂದು ಗುರುತಿಸುತ್ತಾರೆ.

ನಂತರ ದಿನಾಂಕ 14-06-2017 ರಂದು ಚಾಸಾ19 ರವರಾದ ಸಿಡಿಪಿಓ ಹುಣಸೂರು ರವರು ಅಂಚೆ ಮೂಲಕ ಕಳುಹಿಸಿಕೊಟ್ಟ ಪತ್ರವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ದಿನಾಂಕ 19-07-2017 ರಂದು ಚಾಸಾ-22 ರವರಿಂದ 1 ನೇ ಆರೋಪಿ ಹಾಗೂ ಚಾಸಾ1 ರವರು ಹಿಂದೆ ವಾಸವಿದ್ದ ಮನೆಗೆ ಸಂಬಂಧಿಸಿದಂತೆ ದೃಢೀಕರಣ ಪತ್ರ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಗೆ ನಿಪಿ18 ನ್ನು ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ಚಾಸಾ22 ರವರು ನೀಡಿದ ವಾಸದ ದೃಢೀಕರಣ ಪತ್ರ ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ18 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ18(ಎ) ಎಂದು ಗುರುತಿಸಲಾಯಿತು.

ನಂತರ ದಿನಾಂಕ 01-08-2017 ರಂದು 1 ನೇ ಆರೋಪಿಯು ಚಾಸಾ2 ರವರನ್ನು ಮದುವೆಯಾದ ಬಗ್ಗೆ ಚಾಸಾ2 ರವರು ಮದುವೆಯ ಆಮಂತ್ರಣ ಪತ್ರವನ್ನು ಕಛೇರಿಗೆ ಹಾಜರುಪಡಿಸಿದ್ದು, ಅದನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಗೆ ನಿಪಿ15 ನ್ನು ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ಚಾಸಾ2 ರವರು ಹಾಜರುಪಡಿಸಿದ ಮದುವೆ ಆಮಂತ್ರಣ ಪತ್ರಿಕೆ ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ15 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ15(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ2 ರವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಯನ್ನು ದಾಖಲಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ನಂತರ ದಿನಾಂಕ 10-08-2017 ರಂದು ಈ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡ ಚಾಸಾ1 ರವರಿಗೆ ಸೇರಿದ ಸ್ವತ್ತುಗಳನ್ನು ನ್ಯಾಯಾಲಯದ ಆದೇಶದ ಮೇರೆಗೆ ಸೂಕ್ತ ಇಂಡಿಮಿನಿಟಿ ಬಾಂಡ್ ನ್ನು ಪಡೆದು ಚಾಸಾ1 ರವರು ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿಗೆ ನಿಪಿ11 ನ್ನು ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ಚಾಸಾ1 ರವರಿಗೆ ಸ್ವತ್ತುಗಳನ್ನು ಬಿಡುಗಡೆ ಮಾಡುವಾಗ ಅವರಿಂದ ಬರೆಸಿಕೊಂಡ ಇಂಡಿಮಿನಿಟಿ ಬಾಂಡ್ ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ11 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ11(ಸಿ) ಎಂದು ಗುರುತಿಸಲಾಯಿತು.

ನಂತರ ದಿನಾಂಕ 11-09-2017 ರಂದು ತನಿಖೆ ಪೂರ್ಣಗೊಂಡಿದ್ದು, 1 ನೇ ಆರೋಪಿಯ ವಿರುದ್ದ ದೋಷರೋಪ ಸಾಬೀತಾದ್ದರಿಂದ ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು

ಸಲ್ಲಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**ಪಾಟಿ ಸವಾಲು ಃ ಶ್ರೀ. ಬಿ ಎಸ್ ಪಿ ಆರೋಪಿ ಪರ ವಕೀಲರಿಂದ ಃ**

ದಿನಾಂಕ 19-05-2017 ರಂದು ಆರೋಪಿಯ ವಾಸವಿದ್ದ ಮನೆಯ ಬಳಿಗೆ ಹೋದಾಗ ಅಲ್ಲಿ ಮನೆಯ ಹತ್ತಿರ ಆರೋಪಿ ಮಾತ್ರ ಇದ್ದಿದ್ದರು. ಆರೋಪಿಯ ತಂದೆ ತಾಯಿ ಹಾಗೂ ಸಹೋದರ ಹಾಗೂ ಸಹೋದರಿಯರು ಅದೇ ಮನೆಯಲ್ಲಿ ವಾಸವಿರುತ್ತಾರೆ, ಆದರೆ ನಾನು ಮಹಜರಿಗೆ ಹೋದ ಸಮಯದಲ್ಲಿ ಅಲ್ಲಿ ಆರೋಪಿಯನ್ನು ಹೊರತುಪಡಿಸಿ ಬೇರೆ ಯಾರೂ ಇದ್ದಿರಲಿಲ್ಲ. ನಾನು ಕಡತವನ್ನು ತನಿಖೆಯ ಸಲುವಾಗಿ ಕೈಗೆತ್ತಿಕೊಂಡ ಸಮಯದಲ್ಲಿ ಕಡತದಲ್ಲಿನ ದಾಖಲೆಗಳ ಪ್ರಕಾರ ಆರೋಪಿಯು ಚಾಸಾ1 ರವರನ್ನು ಮದುವೆಯಾಗಿ ಸುಮಾರು ಆರು ತಿಂಗಳವರೆಗೆ ಅನ್ಯುನ್ಯವಾಗಿದ್ದು, ನಂತರ ಅವರ ನಡುವೆ ಮನಸ್ತಾಪ ಬಂದು, ಆರೋಪಿ ಚಾಸಾ1 ರವರಿಗೆ ಕಿರುಕುಳ ನೀಡಲು ಆರಂಭಿಸಿರುವುದು ಕಂಡು ಬಂದಿರುತ್ತದೆ. ಆರೋಪಿಯ ಮನೆಯ ಅಕ್ಕಪಕ್ಕ ಎಷ್ಟು ವಾಸದ ಮನೆಗಳಿರುತ್ತವೆ ಎಂದು ನನಗೆ ಈಗ ನೆನಪಿರುವುದಿಲ್ಲ.

ಆರೋಪಿಗೂ ಚಾಸಾ1 ರವರಿಗೂ ಕಿರುಕುಳ ನೀಡುತ್ತಿದ್ದ ವಿಚಾರದ ಸಂಬಂಧ ನಾನು ಆರೋಪಿಯ ಬೆಟೋಳಿಯ ವಾಸದ ಮನೆಯ ಅಕ್ಕಪಕ್ಕದವರನ್ನು ವಿಚಾರಣೆ ಮಾಡಿರುವುದಿಲ್ಲ. ನಿಪಿ2 ಮಹಜರಿಗೆ ಸಹಿ ಮಾಡಿದ ಪಂಚರು ಬೆಟೋಳಿ ಗ್ರಾಮದಿಂದ ಸುಮಾರು 70 ಕಿ ಮೀ ದೂರದಲ್ಲಿ ವಾಸಿಸುವರು ಎಂದರೆ ಸರಿ. ಆರೋಪಿಯು ಗಾಂಧೀನಗರದ ಬಾಡಿಗೆ ವಾಸದ ಮನೆಗೆ ಹೋಗುವ ಮೊದಲೇ ನಾನು ಆರೋಪಿಯ ಸ್ವಇಚ್ಛ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಗಾಂಧೀನರದಲ್ಲಿ ಆರೋಪಿ ವಾಸವಿರುವ ಬಾಡಿಗೆ ಮನೆಯ ಅಕ್ಕಪಕ್ಕ ಸುಮಾರ 18 ರಿಂದ 20 ಮನೆಗಳಿರುತ್ತವೆ ಎಂದರೆ ಸರಿ. ಆರೋಪಿಯ ಮನೆ ಸದರಿ ಕಟ್ಟಡದ 1 ನೇ ಮಹಡಿಯಲ್ಲಿರುತ್ತದೆ. ಸದರಿ ಆರೋಪಿಯು ಬಾಡಿಗೆಗೆ ವಾಸವಿದ್ದ ಮನೆಯ ಮಾಲೀಕರಾದ ಚಾಸಾ15 ರವರನ್ನು ವಿಚಾರಣೆ ಮಾಡಿ ಅವರ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ. ನಾನು ಆರೋಪಿ ವಾಸವಿದ್ದ ಬಾಡಿಗೆ ಮನೆಯ ಬಳಿ ಹೋದಾಗ ಅದು ಬೀಗ ಹಾಕಿದ್ದು, ಆರೋಪಿಯೇ ಸದರಿ ಬೀಗವನ್ನು ತೆಗೆದಿರುತ್ತಾರೆ. ನಾನು ಆರೋಪಿಯನ್ನು ದಸ್ತಗಿರಿ ಮಾಡುವಾಗ ಅವರ ಅಂಗ ಶೋಧನೆ ಮಾಡಿರುವುದಿಲ್ಲ. ಸದರಿ ನಿಪಿ3 ಮಹಜರಿನಲ್ಲಿ ಆರೋಪಿ ತನ್ನ ಜೇಬಿನಿಂದ ಬೀಗದ ಕೀಲಿಯನ್ನು ತೆಗೆದು ಬೀಗ ತೆಗೆದ ಬಗ್ಗೆ ತಿಳಿಸಿರುವುದಿಲ್ಲ. ಆರೋಪಿಯ ವಾಸದ ಅಕ್ಕ ಪಕ್ಕ ಯಾರ ವಾಸದ ಮನೆ ಇದೆ ಎಂದು ನನಗೆ ಈಗ ನೆನಪಿರುವುದಿಲ್ಲ.

ಆರೋಪಿಯ ಮನೆಯ ಅಕ್ಕಪಕ್ಕ ಯಾರ ವಾಸದ ಮನೆ ಇತ್ತೆಂಬುದರ ಬಗ್ಗೆ ಮಹಜರಿನಲ್ಲಿ ತಿಳಿಸಿರುವುದಿಲ್ಲ.

ನಿಪಿ3 ಮಹಜರ ಕ್ರಮ ಜರುಗಿಸಿದ ಮರುದಿನ ಆರೋಪಿಯ ಬೆಟ್ಟೋಳಿ ವಾಸದ ಮನೆಗೆ ಹೋಗಿರುತ್ತೇನೆ. ದಿನಾಂಕ 19-05-2017 ರಂದು ಮಧ್ಯಾಹ್ನ ಸುಮಾರು 3 ಗಂಟೆಗೆ ಆರೋಪಿಯ ಸ್ವಇಚ್ಛಾ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ. ನಿಪಿ2 ಮಹಜರ ಕ್ರಮ ಜರುಗಿಸಿದ ನಂತರ ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ನಾವು ನಿಪಿ2 ಮಹಜರ ಕ್ರಮ ಜರುಗಿಸುವಾಗ ಆರೋಪಿಯ ಮನೆಯಲ್ಲಿ ಯಾವುದೇ ಕೋವಿ ಕಂಡು ಬಂದಿರುವುದಿಲ್ಲ. ನಿಪಿ2 ಮಹಜರನ್ನು ಬರೆದು ನಿಪಿ23 ರಂತೆ ಕಚ್ಚಾ ನಕಾಶೆಯನ್ನು ತಯಾರಿಸುವಾಗ ಸುಮಾರು ಒಂದು ಕಾಲು ಗಂಟೆ ಸಮಯ ತೆಗೆದುಕೊಂಡಿರುತ್ತೇವೆ. ದಿನಾಂಕ 20-05-2017 ರಂದು ಮತ್ತೆ ಆರೋಪಿಯ ಬೆಟ್ಟೋಳಿ ಮನೆಗೆ ಹೋದ ಸಮಯದಲ್ಲಿ ಸದರಿ ಮನೆಗೆ ಬೀಗ ಹಾಕಲಾಗಿತ್ತು. ದಿನಾಂಕ 19-05-2017 ರಂದು ನಿಪಿ2 ರಂತೆ ಮಹಜರ ಕ್ರಮ ಜರುಗಿಸಿದ ನಂತರ ಆರೋಪಿಯೇ ಸದರಿ ಮನೆಗೆ ಬೀಗ ಹಾಕಿ, ಅದರ ಕೀಲಿಯು ಆರೋಪಿಯ ಬಳಿಯೇ ಇದ್ದಿರುತ್ತದೆ.

ದಿನಾಂಕ 19-05-2017 ರಂದು ರಾತ್ರಿ ಪೂರ್ತಿ ಆರೋಪಿ ನಮ್ಮ ವಶದಲ್ಲಿಯೇ ಇದ್ದಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ನಾನು ಆರೋಪಿಯ ಯಾವುದೇ ಅಂಗ ಶೋಧನೆ ಮಾಡಿರುವುದಿಲ್ಲ. ಆರೋಪಿಯಿಂದ ವಶಪಡಿಸಿಕೊಂಡಿದ್ದ ಕೋವಿ ಆರೋಪಿಯ ಬೆಟ್ಟೋಳಿ ಮನೆಯ ನಿಪಿ 23 ರಲ್ಲಿ ಕಾಣಿಸಿದ ಉತ್ತರದ ಕೋಣೆಯಲ್ಲಿದ್ದಿದ್ದು, ಅವುಗಳಲ್ಲಿ ಯಾವ ಕೋಣೆ ಎಂದು ನನಗೆ ಈಗ ನಿರ್ದಿಷ್ಟವಾಗಿ ನೆನಪಿರುವುದಿಲ್ಲ. ಸದರಿ ಕೋವಿ ಅಲಮೇರದ ಪಕ್ಕ ಗೋಡೆಗೆ ತಾಕಿಸಿ ಇಡಲಾಗಿತ್ತು. ಸದರಿ ಕೋವಿಯನ್ನು ಆ ರೀತಿ ಅಲಮೇರದ ಪಕ್ಕ ನಿಲ್ಲಿಸಿಟ್ಟ ಸಂಬಂಧ ಯಾವುದೇ ಫೋಟೋ ತೆಗೆದಿರುವುದಿಲ್ಲ. ಸದರಿ ಕೋವಿ ಇದ್ದ ಕೋಣೆಯ ಉದ್ದಗಲವನ್ನು ನಿಪಿ23 ರಲ್ಲಿ ನಿರ್ದಿಷ್ಟವಾಗಿ ತಿಳಿಸಿರುತ್ತೇನೆ. ನಿಪಿ23 ನ್ನು ತಯಾರಿಸುವಾಗ ಸದರಿ ಕೋವಿ ಕೋಣೆಯಲ್ಲೇ ಇದ್ದಿದ್ದು, ಅದು ಬೀರುವಿನ ಪಕ್ಕಕ್ಕೆ ಇದ್ದುದರಿಂದ ನಮಗೆ ಕಾಣಿಸಿರುವುದಿಲ್ಲ.

ಪಿರ್ಯಾದಿ ನೀಡಿದ ಪುಕಾರಿನಲ್ಲಿ ಆರೋಪಿಯು ಕೋವಿಯಿಂದ ಗುಂಡನ್ನು ಹಾರಿಸಲು ಪ್ರಯತ್ನಿಸಿರುವ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ಅದನ್ನು ಓದಿಕೊಂಡೇ ನಂತರ ನಾನು ನಿಪಿ2 ಮಹಜರ ಜರುಗಿಸಲು ಸ್ಥಳಕ್ಕೆ ಹೋಗಿರುತ್ತೇನೆ. ಸದರಿ ಕೋವಿಗೆ ಸಂಬಂಧಿಸಿದ ಪರವಾನಗಿ ಸದರಿ ಕೋವಿಯ ಪಕ್ಕದಲ್ಲಿದ್ದ ಬೀರುವಿನಲ್ಲಿ ಇದ್ದಿರುತ್ತದೆ. ನಿಪಿ3 ರಂತೆ ಜರುಗಿಸಿದ ಮಹಜರಿನ ಸಾಕ್ಷಿದಾರರು

ಗಾಂಧೀನಗರದಿಂದ ಸುಮಾರು 70 ಕಿ ಮೀ ದೂರದಲ್ಲಿ ವಾಸಿಸುವವರು ಎಂದರೆ ಸರಿ. ಪಿರ್ಯಾದಿಯಾದ ಚಾಸಾ-1 ರವರು ಗಾಂಧೀನಗರದ ಮನೆಯನ್ನು ಯಾವಾಗ ಖಾಲಿ ಮಾಡಿರುತ್ತಾರೆಂಬ ಬಗ್ಗೆ ನಾನು ತನಿಖೆಯಲ್ಲಿ ವಿಚಾರಣೆ ಮಾಡಿರುವುದಿಲ್ಲ. ಪಿರ್ಯಾದಿಯು ಆರೋಪಿಗೆ ಒಂದು ಲಕ್ಷ ವರದಕ್ಷಿಣೆ ಹಾಗೂ ಚಿನ್ನದ ಉಂಗುರವನ್ನು ಯಾವಾಗ ಕೊಟ್ಟಿರುತ್ತಾರೆಂಬ ಬಗ್ಗೆ ತನಿಖೆಯಲ್ಲಿ ವಿಚಾರಣೆ ಮಾಡಿರುವುದಿಲ್ಲ. ಅದೇ ರೀತಿ ಸದರಿ ಉಂಗುರವನ್ನು ಯಾವಾಗ ಎಲ್ಲಿ ಖರೀದಿಸಿದರು ಎಂಬ ಬಗ್ಗೆ ತನಿಖೆಯಲ್ಲಿ ಕಂಡು ಬಂದಿರುವುದಿಲ್ಲ.

ನನ್ನ ತನಿಖೆಯ ಪ್ರಕಾರ ಆರೋಪಿ ಹಾಗೂ ಚಾಸಾ2 ರವರು ಯಾವ ವರ್ಷ, ಬೇರೆಯಾಗಿರುತ್ತಾರೆ ಹಾಗೂ ಯಾವ ವರ್ಷ ಜೊತೆಯಾಗಿರುತ್ತಾರೆ ಎಂಬ ಬಗ್ಗೆ ತನಿಖೆಯಲ್ಲಿ ತಿಳಿದು ಬಂದಿರುವುದಿಲ್ಲ. ಆರೋಪಿಯನ್ನು ದಸ್ತಗಿರಿ ಮಾಡಲು ನೋಟಿಸ್ ನೀಡಿರುವುದಿಲ್ಲ. ಆರೋಪಿಯು ಪಿರ್ಯಾದಿಗೆ ವರದಕ್ಷಿಣೆ ಕಿರುಕುಳ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿಯು ಆರೋಪಿಯ ಜೊತೆಗೆ ಇರುವಾಗ ಅರವತ್ತು ಲಕ್ಷ ಹಣದ ಬೇಡಿಕೆ ಇಟ್ಟಿದ್ದು ಅದನ್ನು ಆರೋಪಿಯು ಪೂರೈಸದೆ ಇದ್ದುದಕ್ಕಾಗಿ ಪಿರ್ಯಾದಿಯು ಆರೋಪಿಯನ್ನು ಬಿಟ್ಟು ಹೋಗಿ ಆರೋಪಿ ವಿರುದ್ದ ಸುಳ್ಳು ಪುಕಾರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರು ನನ್ನ ಮುಂದೆ ಹೇಳಿಕೆ ನೀಡಿರುವುದಿಲ್ಲ ಬದಲಾಗಿ ಈ ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ನಾನೇ ಅವುಗಳನ್ನು ನಮ್ಮ ಸಿಬ್ಬಂದಿಗಳ ಮೂಲಕ ಬೆರಳಚ್ಚು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಎಲ್ಲಾ ಮಹಜರುಗಳನ್ನು ಕಛೇರಿಯಲ್ಲಿಯೇ ಈ ಪ್ರಕರಣಕ್ಕೋಸ್ಕರ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಸರಿಯಾದ ತನಿಖೆಯನ್ನು ನಡೆಸದೆ ಅಮಾಯಕನಾದ ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಆರೋಪಿ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.